4 ನೇ ಸಂತಾನ ಮಹಾದೇವಪ್ಪ ಎಂದರೆ ಸರಿ . ಸದರಿಯವರು ಈಗ ಜೀವಂತವಾಗಿದ್ದಾರೆ ಎಂದರೆ ಸರಿ . ಸದರಿ ನಿಂಗಪ್ಪನ 5 ನೇ ಸಂತಾನ ಬಸಪ್ಪ ಬಸಪ್ಪ ಮದುವೆ ಆಗದೇ ಮರಣ ಹೊಂದಿದ್ದಾರೆ ಎಂದರೆ ಸರಿ . ಸದರಿ ನಿಂಗಪ್ಪನ 7 ನೇ ಸಂತಾನ ರಾಜಶೇಖರಪ್ಪ ಸಂತಾನ ಇಲ್ಲದೇ ಮರಣ ಹೊಂದಿದ್ದಾರೆ ಎಂದರೆ ಸರಿ . ಸದರಿ ನಿಂಗಪ್ಪನ 8 ನೇ ಸಂತಾನ ಅಕ್ಕಮ ಎಂದರೆ ಸರಿ , ಆಕೆ ಜೀವಂತ ಆಗಿದ್ದಾಳೆ ಎಂದರೆ ಸರಿ . ಸದರಿ ನಿಂಗಪ್ಪನ 9 ನೇ ಸಂತಾನ ಹೇಮಪ್ಪ ಮರಣ ಹೊಂದಿದ್ದಾರೆ ಎಂದರೆ ಸರಿ . ಸದರಿ ನಿಂಗಪ್ಪನ 10 ನೇ ಸಂತಾನ ಚೆನ್ನಬಸವ್ವ ಮತ್ತು 11 ನೇ ಸಂತಾನ ಶೋಭಾ ರವರು ಜೀವಂತವಾಗಿದ್ದಾರೆ ಎಂದರೆ ಸರಿ .

ಮೂಲ ಪುರುಷ ಗುರುಲಿಂಗಪ್ಪನ 4 ನೇ ಸಂತಾನ ಚೆನ್ನಬಸಪ್ಪ ರವರಿಗೆ ಸೊಟ್ಟಪ್ಪ ಎಂದು ಇನ್ನೊಂದು ಹೆಸರು ಇತ್ತು ಎಂದರೆ ಸರಿ . ಸದರಿ ಸೊಟ್ಟಪ್ಪನ ಹಿರಿಯ ಮಗಳು ಚೆನ್ನಬಸವ್ವ ಎಂದರೆ ಸರಿ . ಸದರಿ ಚೆನ್ನಬಸವ್ವ ಮರಣ ಹೊಂದಿದ್ದಾಳೆ ಎಂದರೆ ಸರಿ . ಸದರಿ ಚೆನ್ನಬಸವ್ವಳಿಗೆ 4 ಜನ ಗಂಡುಮಕ್ಕಳು ಮತ್ತು ಒಬ್ಬ ಹೆಣ್ಣುಮಗಳು ಇದ್ದಾರೆ ಎಂದರೆ ಸರಿ . ಸದರಿ ಚೆನ್ನಬಸವ್ವಳ ಮಕ್ಕಳ ಹೆಸರುಗಳು ಅಂದರೆ 1) ಹನುಮಂತಪ್ಪ , 2) ಶೇಖಪ್ಪ , 3) ನಾಗವ್ವ , 4) ರುದ್ರಪ್ಪ ಮತ್ತು 5) ಈರಪ್ಪ ಆಗಿವೆ . ಸದರಿ ಸೊಟ್ಟಪ್ಪನ 2 ನೇ ಮಗಳು

ಪುಟ್ಟಮ್ಮ ಮರಣ ಹೊಂದಿದ್ದಾಳೆ ಎಂದರೆ ಸರಿ . ಸದರಿ ಪುಟ್ಟಮ್ಮಳಿಗೆ 5 ಜನ ಮಕ್ಕಳು ಎಂದರೆ ಸರಿ . ಸದರಿ ಪುಟ್ಟಮ್ಮಳ 5 ಜನ ಮಕ್ಕಳು ಅಂದರೆ 1) ಕರಬಸವ್ವ , 2) ಚೆನ್ನಬಸಪ್ಪ , 3) ಚೆನ್ನಪ್ಪ , 4) ಕನ್ನವ್ವ ಮತ್ತು 5) ಮೂಕವ್ವ . ಸದರಿ ಸೊಟ್ಟಪ್ಪನ 3 ನೇ ಮಗ ಗುರುಲಿಂಗಪ್ಪ ಎಂದರೆ ಸರಿ . ಸದರಿ ಗುರುಲಿಂಗಪ್ಪ ನನ್ನ ತಂದೆ ಎಂದರೆ ಸರಿ . ನನ್ನ ತಂದೆ ಗುರುಲಿಂಗಪ್ಪ ಈಗ ಜೀವಂತವಾಗಿರುವುದಿಲ್ಲ . ನನ್ನ ತಾಯಿ ಬಸಮ್ಮ ಜೀವಂತವಾಗಿದ್ದಾರೆ . ಸದರಿ ನನ್ನ ತಂದೆ ಗುರುಲಿಂಗಪ್ಪ ಮತ್ತ ತಾಯಿ ಬಸಮ್ಮ ರವರಿಗೆ 6 ಜನ ಮಕ್ಕಳು ಎಂದರೆ ಸರಿ . ನನ್ನ ತಂದೆ-ತಾಯಿಯ ಹಿರಿಯ ಸಂತಾನ ಸುಭಾಷ ಆಗಿದ್ದಾರೆ ಎಂದರೆ ಸರಿ . 2 ನೇ ಮಗ ಗಂಗಾಧರ ನಾನು ಆಗಿದ್ದೇನೆ ಎಂದರೆ ಸರಿ . 3 ನೇ ಸಂತಾನ ಸೋಮವ್ವ , 4 ನೇ ಸಂತಾನ ರತ್ನವ್ವ , 5 ನೇ ಸಂತಾನ ಮಂಗಳವ್ವ ಮತ್ತು 6 ನೇ ಸಂತಾನ ಲಲಿತಾ ಆಗಿದ್ದಾರೆ ಎಂದರೆ ಸರಿ .

ಸದರಿ ಸೊಟ್ಟಪ್ಪನ 4 ನೇ ಸಂತಾನ ಮಹಾದೇವಕ್ಕ ಆಗಿದ್ದಾಳೆ ಎಂದರೆ ಸರಿ , ಆಕೆ ಈಗ ಜೀವಂತವಾಗಿರವುದಿಲ್ಲ . ಸದರಿ ಮಹಾದೇವಕ್ಕಳ ಗಂಡನ ಹೆಸರು ಬಸನಗೌಡ ಎಂದರೆ ಸರಿ . ಸದರಿ ಮಹಾದೇವಕ್ಕ ಮತ್ತು ಬಸನಗೌಡ ರವರಿಗೆ 3 ಜನ ಗಂಡು ಮಕ್ಕಳು ಎಂದರೆ ಸರಿ. ಅವರೆಂದರೆ 1)ಅಂದಾನಿಗೌಡ , 2) ಈರನಗೌಡ ಮತ್ತು 3) ಪ್ರಭುಗೌಡ ಆಗಿದ್ದಾರೆ ಎಂದರೆ ಸರಿ . ಸದರಿಯವರು ಈಗ ಜೀವಂತವಾಗಿದ್ದಾರೆ . ಸದರಿ ಸೊಟ್ಟಪ್ಪನ 5 ನೇ ಸಂತಾನ

ಗೌರಮ್ಮ ಎಂದರೆ ಸರಿ. ಈಗ ಹೇಳಿರುವ ವ್ಯಕ್ತಿಗಳನ್ನು ಹೊರತುಪಡಿಸಿ ನಮ್ಮ ಮನೆತನಕ್ಕೆ (ಘರಾಣೆಗೆ ) ಸಂಬಂಧಪಟ್ಟವರು ಯಾರೂ ಇರುವುದಿಲ್ಲ .

ದಾವಾ ಸ್ವತ್ತು ಅಸಂಡಿ ಗ್ರಾಮದ ಸರ್ವೇ ನಂ.238/1ಎ , 4 ಎಕರೆ ಜಮೀನು ಮತ್ತು ಅಸುಂಡಿ ಗ್ರಾಮದ ವಿ.ಪಿ.ಸಿ ನಂ.362 ರ ಖಣ (ಬಯಲು ಜಾಗೆ) ಮತ್ತು ಮನೆ ನನ್ನ ತಂದೆ ಗುರುಲಿಂಗಪ್ಪನ ಹಿಸ್ಸೆಗೆ ಬಂದಂತಹ ಆಸ್ತಿಗಳು ಆಗಿರುವುದಿಲ್ಲ ಎಂದರೆ ಸರಿ. ನನ್ನ ತಂದೆಯ ಪಾಲಿಗೆ ಬಂದಂತಹ ಆಸ್ತಿಗಳನ್ನು ನನ್ನ ತಂದೆ ಗುರುಲಿಂಗಪ್ಪ ತನ್ನ ಜೀವಿತ ಅವಧಿಯಲ್ಲಿಯೇ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಈ ದಾವೆಯ ದಾವಾ ಸ್ವತ್ತನ್ನು ನಾನು ಸ್ವತಃ ವೈಯಕ್ತಿಕವಾಗಿ ಸಾಗುವಳಿ ಮಾಡುತ್ತಾ ಇಲ್ಲ ಎಂದರೆ ಸರಿ. ಅದೇ ನ್ಯಾಯಾಲಯದಲ್ಲಿ ಪಾಲು ವಿಭಾಗಕ್ಕೊಸ್ಕರ ಓ.ಎಸ್.ನಂ.117/2012 ರ ದಾವೆಯನ್ನು ಸಲ್ಲಿಸಲಾಗಿತ್ತು ಎಂದರೆ ಸರಿ. ಸದರಿ ದಾವೆಯಲ್ಲಿ ನಾನೂ ಪಕ್ಷಗಾರನಾಗಿದ್ದೆ ಮತ್ತು ನನ್ನ ವಕೀಲರ ಮುಖಾಂತರ ಹಾಜರು ಆಗಿದ್ದೆ ಎಂದರೆ ಸರಿ. ಸದರಿ ದಾವೆ ವಜಾಗೊಂಡಿರುತ್ತದೆ . ಸದರಿ ದಾವೆಯ ತೀರ್ಪನ್ನು ನಾನು ಸಂಪೂರ್ಣವಾಗಿ ಓದಿ ತಿಳಿದು ಕೊಂಡಿರುವುದಿಲ್ಲ . ಸದರಿ ದಾವೆಯ ತೀರ್ಪಿನಲ್ಲಿ ಒಟ್ಟು ಕುಟುಂಬದ ಎಲ್ಲಾ ಸದಸ್ಯರನ್ನು ಸೇರ್ಪಡೆ ಮಾಡಿರುವುದಿಲ್ಲ ಎಂದು ಮತ್ತು ಮೃತ್ಯು ಪತ್ರದಲ್ಲಿ ನಮೂದಿಸಿರುವ ಆಸ್ತಿಗಳಲ್ಲಿ ಪಾಲು ವಿಭಾಗ ಕೇಳಿ ಕೊಂಡಿರುವುದಿಲ್ಲ ಎನ್ನುವ ಕಾರಣಕ್ಕಾಗಿ , ಸದರಿ ಅಂಶಗಳನ್ನು

ಒಳಗೊಂಡಂತೆ ಇನ್ನೊಂದು ಹೊಸ ದಾವೆಯನ್ನು ಸಲ್ಲಿಸಬಹುದಾಗಿರುತ್ತದೆ ಎನ್ನುವ ಅಭಿಪ್ರಾಯದಿಂದ ಸದರಿ ದಾವೆ ವಜಾಗೊಂಡಿರುತ್ತದೆ ಎನ್ನುವುದು ನನಗೆ ಗೊತ್ತಿಲ್ಲ . ಸದರಿ ಓ.ಎಸ್ 117/2012 ರಲ್ಲಿ ನಾನು ಪ್ರತಿವಾದಿ ಆಗಿದ್ದೆ ಎಂದರೆ ಸರಿ . ಸದರಿ ದಾವೆಯಲ್ಲಿ ನಾನು ಸಲ್ಲಿಸಿರುವ ನನ್ನ ಲಿಖಿತ ಪ್ರತಿವಾದ ಪತ್ರದಲ್ಲಿ ನಮೂದಿಸಿರುವಂತೆ ದಿಃ 12-12-1991 ರಂದು ಚೆನ್ನಬಸಪ್ಪ ತಂದೆ ಬಸಪ್ಪ ಕಳ್ಳಿಹಾಳ್ ರವರು ನನ್ನ ಹೆಸರಿಗೆ ಬರೆದುಕೊಟ್ಟಂತಹ ಮೃತ್ಯು ಪತ್ರದಲ್ಲಿ ನಮೂದಿಸಿರುವ ಆಸ್ತಿಯನ್ನು ನಾನು ರುಜುವಾತು ಪಡಿಸಲು ವಿಫಲನಾಗಿದ್ದೇನೆ ಎಂದರೆ ಸರಿ. ನಾನು ಈ ಪ್ರಸ್ತುತ ದಾವೆಯಲ್ಲಿ ಸಲ್ಲಿಸಿರುವ ನನ್ನ ಲಿಖಿತ ಪ್ರತಿವಾದ ಪತ್ರದಲ್ಲಿ ದಿಃ 12-12-1991 ರಂದು ಚೆನ್ನಬಸಪ್ಪ ತಂದೆ ಬಸಪ್ಪ ಕಳ್ಳಿಹಾಳ್ ರವರು ನನ್ನ ಹೆಸರಿಗೆ ಮೃತ್ಯು ಪತ್ರ ಬರೆದು ಕೊಟ್ಟಿದ್ದಾರೆ ಎಂದು ನಮೂದಿಸಿದ್ದೇನೆ ಎಂದರೆ ಸರಿ. ಸದರಿ ಚೆನ್ನಬಸಪ್ಪ ತಂದೆ ಬಸಪ್ಪ ಕಳ್ಳಿಹಾಳ್ ರವರು ಒಂದೇ ಮೃತ್ಯು ಪತ್ರವನ್ನು ಬರೆದು ಕೊಟ್ಟಿದ್ದಾರೆ ಅದನ್ನು ಓಎಸ್ ನಂ.117/2012 ರಲ್ಲಿ ನಾನು ಉಲ್ಲೇಖಿಸಿರುತ್ತೇನೆ . ಸದರಿ ದಿಃ 12-12-1991 ರ ಮೃತ್ಯು ಪತ್ರದ ಆಧಾರದ ಮೇಲೆಯೇ ನಾನು ಈ ದಾವೆಯಲ್ಲಿ ನನ್ನ ಲಿಖಿತ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದೇನೆ ಎಂದರೆ ಸರಿ . ಸದರಿ ಓ.ಎಸ್ ನಂ.117/2012 ರ ತೀರ್ಪು ಮತ್ತು ಡಿಕ್ರಿಯ ವಿರುದ್ಧ ನಾನು ಯಾವುದೇ ಮೇಲ್ಮನವಿಯನ್ನು ಸಲಲ್ಲಿಸಿರುವುದಿಲ್ಲ . ಪ್ರಸ್ತುತ ದಾವೆಯ ದಾವಾ ಸ್ವತ್ತು

ಅಸುಂಡಿ ಗ್ರಾಮದ ಸರ್ವೇ ನಂ.238/1ಎ ರ 4 ಎಕರೆ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ನ್ಯಾಯಾಲಯಗಳಲ್ಲಿ ಯಾವುದೇ ಪ್ರಕರಣ ಚಾಲ್ತಿಯಲ್ಲಿ ಇರುವುದಿಲ್ಲ. ಸದರಿ ಅಸುಂಡಿ ಗ್ರಾಮದ ಸರ್ವೇ ನಂ.238/1ಎ ರ 4 ಎಕರೆ ಜಮೀನಿನಲ್ಲಿ ಇಲ್ಲಿಯವರೆಗೆ ಯಾವುದೇ ಪಾಲು ವಿಭಾಗ ಆಗಿರುವುದಿಲ್ಲ . ದಿಃ 12-12-1991 ರಂದು ಸದರಿ ಚೆನ್ನಬಸಪ್ಪ ತಂದೆ ಬಸಪ್ಪ ಕಳ್ಳಿಹಾಳ್ ರವರು ನನ್ನ ಹೆಸರಿಗೆ ಯಾವುದೇ ಮೃತ್ಯು ಪತ್ರವನ್ನು ಬರೆದು ಕೊಟ್ಟಿಯೇ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಓ.ಎಸ್ ನಂ.117/2012 ಮತ್ತು ಈ ಪ್ರಸ್ತುತ ದಾವೆಯಲ್ಲಿ ನಾನು ಹಾಜರು ಪಡಿಸಿರುವಂತಹ ಸದರಿ ಮೃತ್ಯು ಪತ್ರ ನಾನು ಸೃಷ್ಟಿಸಿದಂತಹ ಮೃತ್ಯು ಪತ್ರ ಆಗಿರುತ್ತದೆ ಎಂದರೆ ಸರಿಯಲ್ಲ. ಈ ದಾವೆಯ ದಾವಾ ಸ್ವತ್ತುಗಳನ್ನು ಸದರಿ ಚೆನ್ನಬಸಪ್ಪ ತಂದೆ ಬಸಪ್ಪ ಕಳ್ಳಿಹಾಳ್ ರವರ ಹಯಾತಿಯಲ್ಲಿ ಪಶ್ಚಾತ್ ಮಾಲೀಕ ಎಂದು ನೊಂದಣಿಯಾದ ದಾಖಲೆಗಳ ಮುಖಾಂತರ ನನ್ನ ಹೆಸರಿಗೆ ವರ್ಗಾವಣೆ ಆಗಿರುವುದಿಲ್ಲ ಎಂದರೆ ಸರಿ . ಸದರಿ ಚೆನ್ನಬಸಪ್ಪ ತಂದೆ ಬಸಪ್ಪ ಕಳ್ಳಿಹಾಳ್ ರವರು ತಮ್ಮ ಮೃತ್ಯು ನಂತರ ದಾವಾ ಸ್ವತ್ತುಗಳು ನನ್ನ ಹೆಸರಿಗೆ ವರ್ಗಾವಣೆ ಮಾಡುವ ಇಚ್ಛೆಯನ್ನು ಹೊಂದಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಓ.ಎಸ್ ನಂ.117/2012 ರ ದಾವೆಯಲ್ಲಿ ದಾವಾ

ಸ್ವತ್ತುಗಳಲ್ಲಿ 12 ವರ್ಷಕ್ಕಿಂತ ಮೇಲ್ಪಟ್ಟ ಅವಧಿಯಿಂದ ನನ್ನ ಸ್ವಾಧೀನದಲ್ಲಿಯೇ ಇದೆ ಎನ್ನುವ ಬಗ್ಗೆ ನಾನು ಉಲ್ಲೇಖಿಸಿರುವುದಿಲ್ಲ . ದಾವಾ ಸ್ವತ್ತು ಕಳೆದ 12 ವರ್ಷಗಳಿಂದ ನನ್ನ ಕಬ್ಜಾ ಮತ್ತು ವಹಿವಾಟಿನಲ್ಲಿ ಇದೆ ಎನ್ನುವ ಕಾರಣಕ್ಕಾಗಿ ನಾನು ಮಾಲೀಕತ್ವದ ಘೋಷಣೆಗೊಸ್ಕರ ಯಾವುದೇ ದಾವೆಗಳನ್ನು ನ್ಯಾಯಾಲಯಗಳಲ್ಲಿ ಸಲ್ಲಿಸಿರುವುದಿಲ್ಲ . ದಾವಾ ಸ್ವತ್ತುಗಳಲ್ಲಿ ವಿಭಾಗ ಆಗಿದೆ ಎನ್ನುವ ಬಗ್ಗೆ ಯಾವುದೇ ಲಿಖಿತ ದಾಖಲೆಗಳು ಇರುವುದಿಲ್ಲ ಮತ್ತು ಅವುಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ . ನಾನು ನನ್ನ ಸೇವಾ ನಿಮಿತ್ತ ಬೇರೆ-ಬೇರೆ ಸ್ಥಳಗಳಲ್ಲಿ ವಾಸವಾಗಿರುವಂತೆ ವಾದಿಗಳೂ ಸಹ ಬೇರೆ-ಬೇರೆ ಸ್ಥಳಗಳಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ . ಸದರಿ ಕಾರಣದಿಂದ ದಾವಾ ಸ್ವತ್ತಿನಲ್ಲಿ ವಾದಿಗಳು ಮತ್ತು ಪ್ರತಿವಾದಿಗಳು ಸಾಮೂಹಿಕ ಕಬ್ಜೆಯಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಈ ದಾವೆಯ ದಾವಾ ಸ್ವತ್ತುಗಳಲ್ಲಿ ಈ ದಾವೆಯ ಎಲ್ಲಾ ಪಕ್ಷಗಾರರು ಸಾಮೂಹಿಕ ಕಬ್ಜೆಯಲ್ಲಿ ಇದ್ದಾರೆ ಎಂದರೆ ಸರಿಯಲ್ಲ ಆದರೆ ಇನ್ನೂವರೆಗೂ ಯಾವುದೇ ವಿಭಜನೆ ಆಗಿಲ್ಲ ಎಂದರೆ ಸರಿ . ಸದರಿ ಚೆನ್ನಬಸಪ್ಪ ತಂದೆ ಬಸಪ್ಪ ಕಳ್ಳಿಹಾಳ್ ರವರು ನನ್ನ ಹೆಸರಿಗೆ ಯಾವುದೇ ಮೃತ್ಯು ಪತ್ರ ಬರೆದು ಕೊಟ್ಟಿರುವುದಿಲ್ಲ ಎನ್ನುವ ವಿಷಯ ನನಗೆ ಗೊತ್ತಿದ್ದರೂ ಸಹ ನಾನು ನ್ಯಾಯಾಲಯದಲ್ಲಿ ಸದರಿಯವರು ನನ್ನ ಹೆಸರಿಗೆ ಮೃತ್ಯು

ಪತ್ರವನ್ನು ಬರೆದು ಕೊಟ್ಟಿದ್ದಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ವಾದಿಗಳು ತಮ್ಮ ಪಾಲಿನ ಹಿಸ್ಸೆಯನ್ನು ತಮಗೆ ನೀಡುವಂತೆ ಅನೇಕ ಬಾರಿ ನನ್ನನ್ನು ಕೇಳಿ ಕೊಂಡಿದ್ದಾರೆ ಮತ್ತು ಅನೇಕ ಪಂಚಾಯಿತಿಗಳೂ ಸಹ ಆಗಿವೆ ಎಂದರೆ ಸರಿಯಲ್ಲ. ಸದರಿ ವಾದಿಗಳು ಅನೇಕ ಬಾರಿ ದಾವಾ ಸ್ವತ್ತುಗಳಲ್ಲಿ ತಮ್ಮ ಪಾಲಿನ ಹಿಸ್ಸೆಯನ್ನು ತಮಗೆ ಕೊಡುವಂತೆ ನನ್ನ ಬಳಿ ಕೋರಿ ಕೊಂಡಿದ್ದರೂ ಸಹ ಸದರಿಯವರು ನನ್ನನ್ನು ವಿಚಾರಿಸಿರುವುದಿಲ್ಲ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

Sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.